ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3266/2023

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ಚಿಕ್ಕಮ್ಮಾ
ಗಂಡನ ಹೆಸರು :- ದೊಡ್ಡವನು ನಿಂಗಯ್ಯ
ವಯಸ್ಸು :- 70 ವರ್ಷ
ಉದ್ಯೋಗ :-ವ್ಯವಸಾಯ
ವಾಸ :- ಬಿ. ಹೊಸಹಳ್ಳಿ

**ಸಾಕ್ಷಿಗೆ ದಿಃ 23.09.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

24 ಮಾರ್ಚ್ 2024 ರಲ್ಲಿ 7.30 ಗಂಟೆಯ ಸಮಯದಲ್ಲಿ ನಾನು ಹಸು ಹೊಡೆದುಕೊಂಡು ಗದ್ದೆ ಹತ್ತಿರ ಕೆಲಸ ಮಾಡಲು ಹೋಗಿದ್ದು ಆರೋಪಿತರು ಅಲ್ಲಿಗೆ ಬಂದು ನನಗೆ ಹೊಡೆದಿರುತ್ತಾರೆ. ಆರೋಪಿ 3 ನನಗೆ ದೊಣ್ಣೆಯಿಂದ ಬೆನ್ನಿಗೆ ಮತ್ತು ತಲೆಗೆ ಹೊಡೆದಿರುತ್ತಾರೆ. ಆರೋಪಿ 1 ಕಪಾಳಕ್ಕೆ ಹೊಡೆದ್ದರಿಂದ ತಲೆ ದಿಮ್ಮ ಹಿಡಿದಿರುತ್ತದೆ. ಆರೋಪಿ 2 ನನ್ನ ತಲೆ ಹಿಡಿದುಕೊಂಡು ಹೊಡೆದಿರುತ್ತಾರೆ. ಚಾ.ಸಾ. 2 ಮತ್ತು 3 ಅವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಅಲ್ಲಿಂದ ಬೆಂಗಳೂರು ಆಸ್ಪತ್ರಗೆ ಹೋಗಿದ್ದು ನಂತರ ಬಂದು22 ನೇ ತಾರೀಖಿನಂದು ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ 1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿ 1 ಅವರ ಜಮೀನು ನಮ್ಮ ಜಮೀನಿನ ಪಕ್ಕ ಇರುತ್ತದೆ ಎಂದರೆ ಸರಿ. ಅವರಿಗೆ ನನ್ನ ಮೇಲೆ ವೈಯಕ್ತಿಕ ದ್ವೇಷ ಇಟ್ಟುಕೊಂಡು ಆಗಾಗ ಬಂದು ಗಲಾಟೆ

ಮಾಡುತ್ತಿದ್ದರು ಎಂದರೆ ಸರಿ. ದಿಃ 20.06.2023 ರಂದು ಬಳಿಗ್ಗೆ 7.30 ಗಂಟೆಯ ಸಮಯದಲ್ಲಿ ಆರೋಪಿತರೆಲ್ಲರೂ ನಾನು ಹಸು ಹಿಡಿದುಕೊಂಡು ಹೋಗುವಾಗ ಜಗಳ ಮಾಡಿರುತ್ತಾರೆಂದರೆ ಸರಿ. ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ಬೈದು ಏಕಮ್ಮಾ ನಮ್ಮ ಜಮೀನಿಗೆ ಬಂದಿದಿಯಾ ಎಂದು ಕೇಳಿರುತ್ತಾರೆಎಂದರೆ ಸರಿ. ಆರೋಪಿ 1 ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 3 ಕೆನ್ನೆಗೆ ಬಲವಾಗಿ ರಕ್ತ ಹೆಪ್ಪುಗಟ್ಟುವಂತೆ ಹೊಡೆದಿರುತ್ತಾರೆಂದರೆ ಸರಿ. ಆರೋಪಿ 2 ಅವರ ಕೈಯಿಂದ ನನ್ನ ಮೈಕೈಗೆ ಗುದ್ದಿ ನೋವುಂಟು ಮಾಡಿರುತ್ತಾರೆಂದರೆ ಸರಿ. ಅದೇ ದಿನ ನಾನು ಹು.ದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ದಿಃ 22.06.2023 ರಂದು ಮಧ್ಯಾಹ್ನ 12.30 ಗಂಟೆಗೆ ನಾನು ದೂರನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರಃ ಜಿ.ಎನ್. ವಕೀಲರಿಂದಃ**

ದಿನಾಂಕ 20 ನೇ ತಾರಿಕಿನಂದು ನಾನು ನನ್ನ ಮಗನಿಗೆ ಫೋನ್ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದೂರನ್ನು ಯಾರು ಟೈಪ್ ಮಾಡಿಸಿದ್ದಾರೆಂದು ಗೊತ್ತಿಲ್ಲ ನಿಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೀರಾ ಎಂದರೆ ಸಾಕ್ಷಿ ನನ್ನ ಮಗ ಟೈಪ್ ಮಾಡಿಸಿರುತ್ತಾನೆ ಎಂದು ಹೇಳುತ್ತಾರೆ. ನನ್ನ ಮಗ ಏನು ಬೆರಸಿರುತ್ತಾನೆಂದು ನನಗೆ ಗೊತ್ತಿಲ್ಲ. 3 ಸೀಮೆ ಹಸುಗಳಿದ್ದು ಅವುಗಳನ್ನು ನಾನೇ ಹೊಡೆದುಕೊಂಡು ಹೋಗುತ್ತಿದ್ದೆ. ಸದರಿ ಹಸುಗಳು ಹಾಲು ಕರೆಯುವ ಹಸುಗಳಾಗಿರುತ್ತೇವೆ ಎಂದರೆ ಸಾಕ್ಷಿ 1 ಕರು ಆಗಿದ್ದು 2 ಹಸುಗಳಾಗಿರುತ್ತೇವೆ ಎಂದು ಹೇಳುತ್ತಾರೆ. ಸೀಮೆ ಹಸುಗಳನ್ನು 7 ಗಂಟೆಗೆ ಹಾಲನ್ನು ಕರೆದು 7.30 ಗಂಟೆ ಡೈರಿಗೆ ನಾನೇ ಹೋಗಿ ಬರುತ್ತೇನೆ.ಡೈರಿಗೆ ಹಾಲು ಹಾಕಿ ಬರುವುದರಲ್ಲಿ 8 ಗಂಟೆ ಆಗಿರುತ್ತದೆ. ನಂತರ ಹಸುಗಳ ಮೈಯನ್ನು ತೊಳೆದು ಹೋಲದ ಕಡೆ ಹೊಗುವಾಗ 9 ಗಂಟೆ ಆಗುತ್ತದೆ ಎಂದರೆ ಸರಿ.

ದೂರನ್ನು ನೀಡಲು ಪೊಲಿಸ ಠಾಣೆಗೆ ನಾನು ನನ್ನ ಮಗ ಹೋಗಿರುತ್ತೇವೆ. ಚಾ.ಸಾ. 4 ಮತ್ತು 5 ಅವರು ಪೊಲಿಸ ಠಾಣೆಗೆ ಬಂದಿರುವುದಿಲ್ಲ. ಈ ವಯಸ್ಸಿನಲ್ಲಿ ಒಬ್ಬಳೇ ಓಡಾಡಲು ಆಗುವುದಿಲ್ಲ ನನ್ನನ್ನು ಮನು ಈ ದಿನ ನ್ಯಾಯಾಲಯಕ್ಕೆ ಕರೆತಂದಿರುತ್ತಾರೆ. ಅವರು ನನ್ನ ತಮ್ಮ ರಾಮಚಂದ್ರಯ್ಯನ ಮಗ ಆಗಿರುತ್ತಾನೆ. ನನಗೆ ರಾಮಕೃಷ್ಣ ಎನ್ನುವ ತಮ್ಮ ಸಹ ಇರುತ್ತಾರೆ ಎಂದರೆ ಸರಿ. ರಾಮಚಂದ್ರಯ್ಯ ಅವರ ಹೆಂಡತಿ ಸುಜಾತಾ ಎಂದರೆ ಸರಿ. ಮನು

ರಾಮಚಂದ್ರಯ್ಯ, ರಾಮಕೃಷ್ಣ ಮತ್ತು ಸುಜಾತಾ ಅವರ ಮೇಲೆ ಆರೋಪಿ 1 ದೂರನ್ನು ನೀಡಿರುತ್ತಾರೆಂದರೆ ಸರಿ. ಆರೋಪಿತರು ದೂರನ್ನು ಕೊಟ್ಟಿದ್ದಾರೆಂದು ಹೇಳಿ ಮನು ಅವರು ನನ್ನ ಕಡೆಯಿಂದ ಹೇಳಿ ದೂರನ್ನು ಕೊಡಿಸಿರುತ್ತಾರೆಂದರೆ ಸರಿ.

ದಿಃ 20.06.2023 ರಂದು ನಾನು ಹಸು ಹೊಡೆದುಕೊಂಡು ಹೋಗುತ್ತಿರಲಿಲ್ಲವೆಂದರೆ ಸರಿಯಲ್ಲ. ಆರೋಪಿತರ ಅಕ್ಕಪಕ್ಕ ನಮ್ಮ ಜಮೀನು ಇರುವುದಿಲ್ಲವೆಂದರೆ ಸರಿಯಲ್ಲ. ಹಸು ಹೊಡೆದುಕೊಂಡು ಹೋಗುವ ಸಮಯದಲ್ಲಿ ಆರೋಪಿತರು ಗಲಾಟೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹು.ದುರ್ಗ ಆಸ್ಪತ್ರೆಗೆ 11.30 ಗಂಟೆಗೆ ಹೋಗಿ ನಂತರ ಅದೇ ದಿನ ಪೊಲಿಸ ಠಾಣೆಗೆ ಹೋಗಿದ್ದೆವು ಎಂದರೆ ಸರಿ. ನಾನು ಆಸ್ಪತ್ರೆಗೂ ಹೋಗಿಲ್ಲ ಪೋಲಿಸ ಠಾಣೆಗೂ ಹೋಗಿಲ್ಲ ನನಗೆ ಯಾವುದೇ ಗಾಯ ಆಗಿಲ್ಲವೆಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲವೆಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದಿದ್ದರೂ ಸಹ ಮನು ಅವರ ವಿರುದ್ದ ದೂರನ್ನು ನೀಡಿದ ಕಾರಣ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಸಂಬಂಧ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.